''ಆಯ್ತು ಏನಾಗಬೇಕು ನಮ್ಮಿಂದ?'' ಆಮಿನಾಬೀ ಕ್ಷಣ ಕಾಲ ತಡವರಿಸಿದಳು. ಬೆವರು ಕಿತ್ತುಕೊಂಡು ಹರಿಯಿತು. ಅವಳು ಹೇಳಲೋ ಬೇಡವೋ ಎಂಬ ತಾಕಲಾಟದಲ್ಲಿ ಇದ್ದು ಕೊನೆಗೂ ಬಾಯಿ ಬಿಟ್ಟಳು.

''ಸಾಲಿಹಾ ಬೇಗಂ, ನಾನು ನೇರವಾಗಿ ನಿಮ್ಮ ಹತ್ತಿರ ಬಂದಿದ್ದೇನೆ. ಸಂಪ್ರದಾಯ ಏನೆಂದರೆ ನಿಮಗೆ ಬೇರೆಯವರ ಮೂಲಕ ಈ ಮಾತನ್ನು ತಲುಪಿಸಬೇಕಿತ್ತು. ಆದರೆ ಈ ಸಂದರ್ಭದಲ್ಲಿ ಅದು ಸರಿ ಕಾಣಲಿಲ್ಲ. ಅದಕ್ಕೆ ನಾನೇ ನೇರವಾಗಿ ಬಂದಿದ್ದೇನೆ." ಯಾಕೋ ಸಂಶಯದ ಸಣ್ಣ ಎಳೆಯೊಂದು ಅವಳ ಮನಸ್ಸಿನಲ್ಲಿ ಹಾದುಹೋಯಿತು. ಇಬ್ಬರು ಬೆಳೆದ ಹೆಣ್ಣು ಮಕ್ಕಳ ತಾಯಿಯಾಗಿ ಜವಾಬ್ದಾರಿಗಳನ್ನು ಹೊತ್ತು ನಿಭಾಯಿಸುವ ಸೂಕ್ಷ್ಮತೆ ಆಕೆಗೆ ಕರಗತವಾಗಿತ್ತು. ಮತ್ತು ಯಾವುದೇ ಒಂದು ಮಿಥ್ಯಾರೋಪದ ಕಲೆ ಅವರಿಗಾಗಲೀ ಅಥವಾ ಅವರ ವ್ಯಕ್ತಿತ್ವಕ್ಕಾಗಲೀ ತಾಗದಂತೆ ಅವರನ್ನು ಸಂರಕ್ಷಿಸುವ ಅಪಾರ ಜವಾಬ್ದಾರಿ ಸಾಲಿಹಾಳ ತಲೆಯ ಮೇಲೆ ಇತ್ತು. ಯಾವುದೇ ಸಮಸ್ಯೆ ತನ್ನ ಹೆಣ್ಣು ಮಕ್ಕಳಿಗೆ ಸಂಬಂಧ ಪಟ್ಟಿದ್ದು ಇರಲಾರದು ಎಂದು ಆಕೆ ತನ್ನ ಕಳವಳಕ್ಕೀಡಾದಳು. ಅಪಾರ ಸಂಭವನೀಯ ಅಪಾಯಗಳನ್ನು ತನಗೆ ತಾನೇ ಸೃಷ್ಟಿಸಿಕೊಳ್ಳುತ್ತಾ ಒಂದಿಷ್ಟು ಬೆದರಿದವಳಾಗಿ ಏನನ್ನೂ ನುಡಿಯದೇ ಆಮಿನಬೀಯ ಮೋರೆಯನ್ನು ದಿಟ್ಟಿಸತೊಡಗಿದಳು.

ಆಮಿನಬೀ ಮತ್ತೆ ಅಳಿದುಳಿದಿದ್ದ ಶಕ್ತಿಯನ್ನು ಒಟ್ಟು ಗೂಡಿಸಿಕೊಳ್ಳುತ್ತಾ ನಿಧಾನವಾಗಿ ಆರಂಭಿಸಿದಳು. "ಸಾಲಿಹಾ ಬೇಗಂ, ನಾನು ನಮ್ಮ ಮನೆಯ ಬೆಳಕಿಗೋಸ್ಕರ ನಿಮ್ಮ ಮನೆಯ ದೀಪವನ್ನು ಕೇಳಲು ಬಂದಿದ್ದೇನೆ. ನನಗೆ ಇರುವವನೊಬ್ಬನೇ ಮಗ. ನಿಮಗೂ ಗೊತ್ತಿರಬಹುದು ಅಥವಾ ನಿಮ್ಮ ಮನೆಯವರಿಗಾದರೂ ಗೊತ್ತಿರುತ್ತದೆ. ಅವನು ಐದು ಹೊತ್ತು ನಮಾಜ್ ಮಾಡುತ್ತಾನೆ." ಆಕೆ ಒಂದು ಕ್ಷಣ ತಡೆದಳು, ಸುಳ್ಳು ಹೇಳಲು ಸುಲಭವಾಗಿ ನಾಲಿಗೆ ಹೊರಳಲಿಲ್ಲ. ಅವನು ಪ್ರತಿ ಶುಕ್ರವಾರ ಮತ್ತು ರಮಜಾನ್‌ನಲ್ಲಿ ಒಂದು ಹದಿನೈದು ದಿನ ಮತ್ತು ಬಕ್ರೀದ್ ಹಬ್ಬದಲ್ಲಿ ಮಾತ್ರ ನಮಾಜ್‌ಗೆ ಹೋಗುತ್ತಿದ್ದ. ತನ್ನ ಉತ್ಪ್ರೇಕ್ಷಿತ ಪ್ರಶಂಸೆಯು ಏನಾದರೂ ಪರಿಣಾಮ ಬೀರಿದೆಯೇ ಎಂದು ಆಕೆ ಸಾಲಿಹಾಳನ್ನು ಪರೀಕ್ಷಕ ದೃಷ್ಟಿಯಿಂದ ನೋಡಿದಳು. ಸಾಲಿಹಾ ಮಾತ್ರ ಯಾವ ಭಾವವನ್ನೂ ಪ್ರಕಟಿಸದೆ ಮಂಜುಗಡ್ಡೆಯಂತಾಗಿದ್ದಳು. 'ದೇವರೆ ಇವಳನ್ನು ಎಲ್ಲಿಂದ ಭೇದಿಸುವುದು?' ಎಂದು ತನ್ನಲ್ಲೇ ಮಿಡುಕುತ್ತ ಆಮಿನಬೀ ಮತ್ತೆ ಆರಂಭಿಸಿದಳು. ನನಗೆ ಇಬ್ಬರು ಹೆಣ್ಣು ಮಕ್ಕಳು. ಮದುವೆಯಾಗಿ ಅವರವರ ಮನೆಯಲ್ಲಿ ನೆಮ್ಮದಿಯಾಗಿದ್ದಾರೆ. ಮಗ ಮಾತ್ರ ಪಿಯುಸಿಯಲ್ಲಿ ಫೇಲ್ ಆದ. ಕೊನೆಯ ಪಕ್ಷ ಎಂಜಿನಿಯರ್ ಆದರೂ ಆಗತಾನೆ ಅಂತ ನಾನು ನಂಬಿದ್ದೆ. ಅದೊಂದು ಆಗಲಿಲ್ಲ ಅನ್ನೋದು ಬಿಟ್ಟರೆ ಅವನು ಚಿನ್ನದಂತಹ ಹುಡುಗ. ಇಲ್ಲೇ ಮೇನ್ ಸರ್ಕಲ್‌ನಲ್ಲಿ ಮೊಬೈಲ್ ಅಂಗಡಿ ಇಟ್ಟಿದಾನೆ." ಅವಳ ಮಾತು ಇನ್ನೂ ಮುಗಿದಿರಲಿಲ್ಲ. ಸಾಲಿಹಾಗೆ ಅಪಾರ ಕೋಪ ಬಂದು ಮೈ ನಡುಗಲಾರಂಭಿಸಿತು. ಅವಳು ಅತ್ಯಂತ ಆತ್ಮಬಲದಿಂದ ಕೂಡಿ ಸಾವಧಾನವಾಗಿ ಅದನ್ನು ನಿಗ್ರಹಿಸಿಕೊಂಡಳು.

ಸಾಲಿಹಾ ತನ್ನ ಯಾವುದೇ ಪ್ರತಿಕ್ರಿಯೆಯನ್ನು ನೀಡಲಿಲ್ಲವಾದ್ದರಿಂದ ಆಮಿನಾಬೀ ಮತ್ತಷ್ಟು ಗೊಂದಲಕ್ಕೆ ಈಡಾದಳು. ಆಕೆ ಇನ್ನಷ್ಟು ಅನುನಯದ ಧ್ವನಿಯಲ್ಲಿ ಹೇಳತೊಡಗಿದಳು, ''ನಿಮ್ಮ ವರದಕ್ಷಿಣೆ ಒಂದು ಪೈಸೆಯನ್ನೂ ನಾವು ಬೇಡುವುದಿಲ್ಲ. ಬದಲಿಗೆ ನಿಮ್ಮ ಮಗಳಿಗೆ ಒಂದು ಕರಾಚೀ ಹಾರ್, ನಾಲ್ಕು ಬಳೆ, ಒಂದು ಲಚ್ಛಾ ಎರಡು ಉಂಗುರ, ಕಾಲಿಗೆ ಬೆಳ್ಳಿ ಚೈನು ಹದಿನೇಳು ಜೊತೆ ಬಟ್ಟೆ ಇವುಗಳನ್ನು ತಂದು ಮದುವೆ ಮಾಡಿಕೊಳ್ಳುತ್ತೀವಿ. ನಿಮ್ಮ ಯಾವುದೇ ಊಟ ಉಪಚಾರ ನಮಗೆ ಬೇಕಿಲ್ಲ. ನಿಮ್ಮ ಮನೆಯಲ್ಲಿ ನಿಖಾ ಮಾಡಿಕೊಡಿ ಸಾಕು. ನಾವು ವಲಿಮಾ(ಬೀಗರೂಟ)ವನ್ನು ಮಾಡ್ತೀವಿ".